ಈ) ಸರ್ವೆ ಮತ್ತು ತನಿಖಾ ಕಾರ್ಯ ಮುಗಿದ ನಂತರ, ಈ ಯೋಜನೆಗಳ ಸಾಧ್ಯತೆಯ ಕಾರ್ಯದ ಬಗ್ಗೆ ಪರಿಶೀಲಿಸಲಾಗುವುದು.

ತರೀಕೆರೆ ತಾಲ್ಲೂಕಿನಲ್ಲಿ ನೀರಾವರಿ ಯೋಜನೆ

5078 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತರೀಕೆರೆ ತಾಲ್ಲೂಕಿನ ಬರಗೇನಹಳ್ಳಿ ಮತ್ತು ಹರುವನಹಳ್ಳಿ ಮತ್ತು ಶಾಂತಿಪುರ ಪಿಕಪ್‌ಗಳು ಮತ್ತು ಕಾಲುವೆಗಳ ದುರಸ್ತಿಗಾಗಿ ಸರ್ಕಾರ ಕೈಗೊಂಡ ಕ್ರಮಗಳು ಯಾವುವು?*

ಆ) *ಈ ಕಾಲುವೆ ಹಾಗೂ ಪಿಕಪ್‌ಗಳು ಒಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗೂ ಈ ಯೋಜನೆಯ ಅಂದಾಜು ವೆಚ್ಚ ಮತ್ತು ನಕ್ಷೆ ತಯಾರು ಮಾಡಲಾಗಿದೆಯೇ?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಬರಗೇನಹಳ್ಳಿಯಲ್ಲಿ ಪಿಕಪ್ ಇರುವುದಿಲ್ಲ ಹರುವನಹಳ್ಳಿ ಪಿಕಪ್ ನಿರ್ಮಾಣ ಕಾಮಗಾರಿಗೆ ಅನುದಾನ ಲಭ್ಯವಿಲ್ಲದೆ ಇರುವ ಕಾರಣ ಕೈಗೆತ್ತಿಗೊಳ್ಳಲು ಸಾಧ್ಯವಾಗಿರುವುದಿಲ್ಲ. ಶಾಂತಿಪುರ ಪಿಕಪ್ ಮತ್ತು ಕಾಲುವೆಗಳ ದುರಸ್ತಿಗಾಗಿ ರೂ.5.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಪರಿಶೀಲನೆಯಲ್ಲಿದೆ.

ಆ) ಬಂದಿದೆ. ಶಾಂತಿಪುರ ಪಿಕಪ್ ಮತ್ತು ಕಾಲುವೆಗಳ ದುರಸ್ತಿಗಾಗಿ ರೂ. 5.00 ಲಕ್ಷಗಳ ಅಂದಾಜನ್ನು ತಯಾರಿಸಲಾಗಿದ್ದು ಪರಿಶೀಲನೆಯಲ್ಲಿದೆ.

ಹರುವನಹಳ್ಳಿ ಪಿಕಪ್ ನಿರ್ಮಾಣ ಕಾಮಗಾರಿಗೆ 2000-01ನೇ ಸಾಲಿನ ಆಯವ್ಯಯದಲ್ಲಿ ಶೇಕಡ 30ರಷ್ಟು ಅನುದಾನ ಲಭ್ಯವಿಲ್ಲದ ಕಾರಣ ಅಂದಾಜನ್ನು ತಯಾರಿಸಿರುವುದಿಲ್ಲ.

ತರೀಕೆರೆ ತಾಲ್ಲೂಕು ಗುಡ್ಡದ ಮಲ್ಲನ ಕೆರೆಗೆ ಭದ್ರಾ ನೀರು

5079 - ಶ್ರೀ ಬಿ.ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಭದ್ರಾ ಜಲಾಶಯದ ಮೂಲಕ ತರೀಕೆರೆ ತಾಲ್ಲೂಕು ಗುಡ್ಡದ ಮಲ್ಲದ ಕೆರೆಗೆ ನೀರು ಒದಗಿಸಿ ಗ್ರಾಮಾಂತರ ಪ್ರದೇಶಗಳಿಗೆ ನೀರು ಕೊಡಲು ಸರ್ಕಾರ ಅನುಮತಿ ನೀಡಿದೆಯೇ?*

ಆ) *ಹಾಗಿದ್ದಲ್ಲಿ ಎಷ್ಟು ಕ್ಯೂಸೆಕ್ಸ್ ನೀರನ್ನು ತೆಗೆದುಕೊಳ್ಳಲು ಅನುಮತಿ ನೀಡಿದೆ?*

ಇ) *ಈ ಕಾಮಗಾರಿ ಅಂದಾಜು ಮತ್ತು ನಕ್ಷೆ ಆಗಿದೆಯೇ? ಅಂದಾಜು ಮೊತ್ತ ಎಷ್ಟು?*

ಶ್ರೀ ಹೆಚ್.ಕೆ. ಪಾಟೀಲ್ (ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು) :

ಅ) ನೀಡಿದೆ.